(ಇಂದು ದಿನಾಂಕ 13-03-2026 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಬಿ.ಕೆ.ಎನ್. ವಕೀಲರಿಂದಃ**

ನಾನು 10 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ವ್ಯವಹಾರವನ್ನು ಯಾವ ರೀತಿಯಾಗಿ ಮಾಡಬೇಕು ಎನ್ನುವ ಸಾಮಾನ್ಯ ಜ್ಞಾನ ನನಗೆ ಇದೆ. ಬಂಗಾರಕ್ಕೆ ಸಂಬಂಧಪಟ್ಟಂತಹ ವ್ಯವಹಾರವನ್ನು ಮಾಡಬೇಕಾದಾಗ ಸರಕಾರದ ಕಾನೂನು ಮತ್ತು ನಿಯಮಗಳನ್ನು ಪಾಲಿಸಬೇಕಾಗುತ್ತದೆ ಎಂದರೆ ಸರಿ. ಅಕ್ಕಸಾಲಿಗ ಎಂದರೆ ಬಂಗಾರದ ಆಭರಣಗಳನ್ನು ತಯಾರಿಸುವುದು ಮತ್ತು ಮಾರಾಟ ಮಾಡುವುದು ಎಂದರೆ ಸರಿ. ಅಂಗಡಿ ನಡೆಸಲು ನಗರಸಭೆಯಿಂದ ಪರವಾನಿಗೆಯನ್ನು ಪಡೆದುಕೊಂಡಿದ್ದೇವೆ. ನಗರಸಭೆಯಿಂದ ಪಡೆದುಕೊಂಡಂತಹ ಪರವಾನಿಗೆಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿಲ್ಲ. ನಾನು ಪರವಾನಿಗೆ ಪಡೆದುಕೊಳ್ಳದೇ ಇರುವುದರಿಂದ ನ್ಯಾಯಾಲಯದ ಮುಂದೆ ಹಾಜರುಪಡಿಸಿಲ್ಲ ಅನ್ನುವುದು ಸರಿಯಲ್ಲ. ಸೇಲ್ಸ್ ಟ್ಯಾಕ್ಸ್ ಡಿಪಾರ್ಟಮೆಂಟನಲ್ಲಿ ಟ್ಯಾಕ್ಸ್ ತುಂಬಲು ನೋಂದಣಿ ಮಾಡಿಕೊಂಡಿಲ್ಲ. ತೆರಿಗೆಯನ್ನು ತುಂಬದೇ ವ್ಯಾಪಾರ ಮಾಡಿದರೆ ವಂಚನೆ ಆಗುತ್ತದೆ ಎಂದರೆ ಸರಿ. ನಾವು ಬಂಗಾರವನ್ನು ಎಷ್ಟು ತೆಗೆದುಕೊಂಡಿದ್ದೇವೆ ಮತ್ತು ಎಷ್ಟು ಮಾರಾಟ ಮಾಡಿದ್ದೇವೆ ಎಂದು ತೋರಿಸಲು ರಜಿಸ್ಟರನ್ನು ಇಟ್ಟಿರುತ್ತೇವೆ ಎಂದರೆ ಸರಿ. ನಾನು ಆ ರೀತಿ ಯಾವುದೇ ರಜಿಸ್ಟರನ್ನು ಇಟ್ಟಿಲ್ಲ ಎಂದರೆ ಸರಿ. ಬಂಗಾರದ ವ್ಯವಹಾರ ಮಾಡಬೇಕಾದರೆ ಬಿ.ಐ.ಎಸ್. ಬ್ಯೂರೋ ಆಫ್ ಇಂಡಿಯನ್ ಸ್ಟ್ಯಾಂಡರ್ಡ ಹೋಲ್ ಮಾರ್ಕನ್ನು ಇಟ್ಟುಕೊಳ್ಳಬೇಕಾಗುತ್ತದೆ ಎಂದರೆ ಸಾಕ್ಷಿ ನಾನು ಅದರಲ್ಲಿ ಬರುವಂತಹ ಕೆಲಸ ಮಾಡುವುದಿಲ್ಲ ಎಂದು ಹೇಳುತ್ತಾರೆ. ನಾನು ಬಂಗಾರದ ಆಭರಣಗಳನ್ನು ತಯಾರಿಸಿ ಮಾರಾಟ ಮಾಡುತ್ತೇನೆ. ನಾನು ಸ್ಕಿಲ್ ವರ್ಕ್ ಕೆಲಸ ಮಾಡುತ್ತೇನೆ. 2023 ರಲ್ಲಿ ನಾನು ಆರೋಪಿಯೊಂದಿಗೆ ಮಾಡಿದ್ದೇನೆ ಎಂದು ಹೇಳಲಾದ ವ್ಯವಹಾರ ಕಾನೂನುಬಾಹಿರವಾಗಿದೆ ಎಂದರೆ ಸರಿಯಲ್ಲ.

ಆರೋಪಿ ಸುಮಾರು 10 ವರ್ಷಗಳಿಂದ ನನಗೆ ಪರಿಚಯಸ್ಥ. 2015-16 ರಲ್ಲಿ ಆರೋಪಿ ದ್ವಿಚಕ್ರ ವಾಹನ ಖರೀದಿಸಿದ್ದ ಎಂದರೆ ಸರಿ. ಸದರಿ ದ್ವಿಚಕ್ರ ವಾಹನ ತೆಗೆದುಕೊಳ್ಳುವಾಗ ಹಣವನ್ನು ನಾನೇ ಕೊಟ್ಟಿದ್ದೆ ಎಂದರೆ ಸರಿ. ಸದರಿ ಹಣವನ್ನು ಕೊಡುವಾಗ ನಾನು ಭದ್ರತೆಗಾಗಿ ಚಕ್‌ನ್ನು ಪಡೆದುಕೊಂಡಿದ್ದೆ ಎಂದರೆ ಸರಿ. ದ್ವಿಚಕ್ರ ವಾಹನಕ್ಕೆ ಸಂಬಂಧಪಟ್ಟಂತೆ ಆರೋಪಿ ಸರಿಯಾಗಿ ಹಣ ಕಟ್ಟಿಲ್ಲ ಅನ್ನುವುದು ಸರಿಯಲ್ಲ. ನಾನು ಆರೋಪಿಗೆ ದ್ವಿಚಕ್ರ ವಾಹನವನ್ನು ತೆಗೆದುಕೊಳ್ಳುವಾಗ ಕೊಟ್ಟಂತಹ ಹಣವನ್ನು ಮರಳಿ ಕೊಡದಿದ್ದಾಗ ಆರೋಪಿಯ ದ್ವಿಚಕ್ರ ವಾಹನವನ್ನು ಎತ್ತಿಕೊಂಡು ಬಂದಿದ್ದೇನೆ ಅನ್ನುವುದು ಸರಿಯಲ್ಲ, ಸಾಕ್ಷಿ ಮುಂದುವರಿದು ಆರೋಪಿಯೇ ನನಗೆ ಕೊಟ್ಟಿದ್ದಾನೆ ಎಂದು ಹೇಳುತ್ತಾರೆ. ಆರೋಪಿಗೆ ನಾನು ಕೊಟ್ಟಿದ್ದೇನೆ ಎಂದು ಹೇಳಲಾದ 85 ಗ್ರಾಂ ಬಂಗಾರ ಗ್ರಾಹಕರಿಗೆ ಸಂಬಂಧಪಟ್ಟಿದ್ದು. ಸಾಮಾನ್ಯವಾಗಿ ಗ್ರಾಹಕರಿಂದ ಶುದ್ಧ ಬಂಗಾರ ತೆಗೆದುಕೊಳ್ಳಬೇಕಾದರೆ ಅವರಿಂದ ಎಲ್ಲಿಂದ ತೆಗೆದುಕೊಂಡಿದ್ದಾರೆ ಎಂದು ತೋರಿಸಲು ರಶೀದಿಯನ್ನು ತೆಗೆದುಕೊಳ್ಳಬೇಕಾಗುತ್ತದೆ ಎಂದರೆ ಸಾಕ್ಷಿ ಗ್ರಾಹಕರು ನನಗೆ ಹಣ ಕೊಟ್ಟಿದ್ದರು ಅದರಿಂದ ನಾನು ಬಂಗಾರವನ್ನು ಖರೀದಿಸಿದ್ದೇನೆ ಎಂದು ಹೇಳುತ್ತಾರೆ. ನಾನು ಬಂಗಾರವನ್ನು ಖರೀದಿಸಿದ್ದೆ ಎಂದು ತೋರಿಸುವ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ನಾನು 85 ಗ್ರಾಂ ಬಂಗಾರವನ್ನು ಖರೀದಿಸಿಲ್ಲ ಮತ್ತು ಆರೋಪಿಗೆ ಕೊಟ್ಟಿಲ್ಲ ಅನ್ನುವುದು ಸರಿಯಲ್ಲ. ಶುದ್ಧ ಬಂಗಾರದಿಂದ ಒಡವೆಗಳನ್ನು ಮಾಡಲು ಬರುವುದಿಲ್ಲ ಎಂದರೆ ಸರಿ. ಅದಕ್ಕೆ ತಾಮ್ರ ಮತ್ತು ಬೆಳ್ಳಿಯನ್ನು ಸೇರಿಸಬೇಕಾಗುತ್ತದೆ ಎಂದರೆ ಸರಿ.10 ಗ್ರಾಂ ಬಂಗಾರಕ್ಕೆ ಆಭರಣ ಮಾಡುವಾಗ 916 ರಲ್ಲಿ ಮಾಡಬೇಕಾದರೆ 800 ಮಿಲಿ ತಾಮ್ರ ಅಥವಾ ಬೆಳ್ಳಿಯನ್ನು ಸೇರಿಸಬೇಕಾಗುತ್ತದೆ. ಫಿರ್ಯಾದಿಯಲ್ಲಿ ತೋರಿಸಿದಂತಹ ಆಭರಣಗಳ ಒಟ್ಟೂ ತೂಕ 85 ಗ್ರಾಂ ಎಂದರೆ ಸರಿ. 85 ಗ್ರಾಂ ಬಂಗಾರಕ್ಕೆ 714 ಮಿಲಿ ತಾಮ್ರ ಅಥವಾ ಬೆಳ್ಳಿಯನ್ನು ಸೇರಿಸಬೇಕಾಗುತ್ತದೆ ಎಂದರೆ ಸರಿ. 85 ಗ್ರಾಂಗೆ ತಾಮ್ರ ಅಥವಾ ಬೆಳ್ಳಿಯನ್ನು ಸೇರಿಸಿ ಆಭರಣ ಮಾಡಿದಾಗ ಅದರ ಒಟ್ಟೂ ತೂಕ 92 ಗ್ರಾಂ ಬರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಮಜೂರಿಯನ್ನು ಬಂಗಾರದ ರೂಪದಲ್ಲಿ ಕೊಡುತ್ತೇವೆ

ಎಂದು ಹೇಳುತ್ತಾರೆ. ನಮ್ಮ ಗ್ರಾಹಕರಿಂದ 85 ಗ್ರಾಂ ಬಂಗಾರದ ಆಭರಣ ಮಾಡಿಕೊಳ್ಳಲು ಆರ್ಡರನ್ನು ಪಡೆದುಕೊಂಡ ಬಗ್ಗೆ ದಾಖಲಾತಿಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ 85 ಗ್ರಾಂ ಬಂಗಾರವನ್ನು ಕೊಟ್ಟಿದ್ದೇನೆ ಎಂದು ತೋರಿಸಲು ನ್ಯಾಯಾಲಯದ ಮುಂದೆ ದಾಖಲಾತಿಗಳನ್ನು ಹಾಜರುಪಡಿಸಿದ್ದೇನೆ. 2016 ರಲ್ಲಿ ಆರೋಪಿ ಕೊಟ್ಟಂತಹ ಚೆಕ್ಕನ್ನು ದುರುಪಯೋಗಪಡಿಸಿಕೊಂಡು ಈ ಸುಳ್ಳು ಕೇಸನ್ನು ಹಾಕಿದ್ದೇನೆ ಅನ್ನುವುದು ಸರಿಯಲ್ಲ. ನಿ.ಪಿ.1 ರ ಮೇಲಿರುವ ಹಣವನ್ನು ಮತ್ತು ದಿನಾಂಕವನ್ನು ನಾನೇ ಬರೆದುಕೊಂಡಿದ್ದೇನೆ ಅನ್ನುವುದು ಸರಿಯಲ್ಲ. ಆರೋಪಿಗೆ ನಾನು ಕೊಟ್ಟಂತಹ ನೋಟಿಸ್ ತಲುಪಿಲ್ಲ ಅನ್ನುವುದು ಸರಿಯಲ್ಲ. ಆರೋಪಿ ನನಗೆ ಯಾವುದೇ ಹಣವನ್ನು ಕೊಡುವ ಹೊಣೆಗಾರಿಕೆ ಇಲ್ಲ ಅನ್ನುವುದು ಸರಿಯಲ್ಲ. ನಾನು ಹಾಕಿದಂತಹ ಕೇಸು ಸುಳ್ಳು ಕೇಸಾಗಿದ್ದು ಕಾನೂನಿನಡಿಯಲ್ಲಿ ನಡೆಯುವಂತಹ ಕೇಸು ಅಲ್ಲ ಅನ್ನುವುದು ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಮುಖ್ಯ ನ್ಯಾದಂ. ಕಾರವಾರ